# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/276/14-15

ದಿನಾಂಕ :05-08-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಶಿವನಗೌಡ ತಂದೆ ಲೇಟ್ ಪೊಂಪನಗೌಡ @ ಪಂಪಣ್ಣ @ ದೊಡ್ಡ ಪೊಂಪನಗೌಡ, ಸಾ\|\|ಹಿರೇಹಡ್ಲಿಗಿ ಗ್ರಾಮ ತಾ\|\|ಬಳ್ಳಾರಿ<br><br>ಶ್ರೀ ಡಿ ಸತೀಶ್ ಕುಮಾರ್, ವಕೀಲರು, ಬಳ್ಳಾರಿ | 1. ತಹಶೀಲ್ದಾರರು, ಬಳ್ಳಾರಿ<br>2. ಕಂದಾಯ ನಿರೀಕ್ಷಕರು, ಕೋಳೂರು<br>3. ಗ್ರಾಮ ಲೆಕ್ಕಾಧಿಕಾರಿಗಳು, ಹಿರೇಹಡ್ಲಿಗಿ<br>4. ಶ್ರೀ ಎನ್ ಲಿಂಗಮ್ಮ ಗಂಡ ಲೇಟ್ ಎನ್ ವಿರುಪಾಕ್ಷಿ ಗೌಡ, ಸಾ\|\|ಹಿರೇಹಡ್ಲಿಗಿ ಗ್ರಾಮ ತಾ\|\|ಬಳ್ಳಾರಿ<br>5. ಎನ್ ಬಸಮ್ಮ ಗಂಡ ಲೇಟ್ ಎನ್ ಲಿಂಗನಗೌಡ, ಸಾ\|\|ತಾರಾನಗರ ಗ್ರಾಮ ತಾ\|\|ಸಂಡೂರು<br>6. ಶ್ರೀ ಎನ್ ಬಸವನಗೌಡ ತಂದೆ ಲೇಟ್ ಪೊಂಪನಗೌಡ @ ಪಂಪಣ್ಣ @ ದೊಡ್ಡ ಪೊಂಪನಗೌಡ, ಸಾ\|\|ಹಿರೇಹಡ್ಲಿಗಿ ಗ್ರಾಮ, ತಾ\|\|ಬಳ್ಳಾರಿ<br>7. ಶ್ರೀಮತಿ ಈರಮ್ಮ ಗಂಡ ಲೇಟ್ ಸಿದ್ದನಗೌಡ, ಸಾ\|\|ಹಿರೇಹಡ್ಲಿಗಿ ಗ್ರಾಮ ತಾ\|\|ಬಳ್ಳಾರಿ<br>8. ಶ್ರೀ ಎನ್ ಮಲ್ಲನಗೌಡ ತಂದೆ ಲೇಟ್ ಪೊಂಪನಗೌಡ @ ಪಂಪಣ್ಣ @ ದೊಡ್ಡ ಪೊಂಪನಗೌಡ, ಸಾ\|\|ಹಿರೇಹಡ್ಲಿಗಿ ಗ್ರಾಮ ತಾ\|\|ಬಳ್ಳಾರಿ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಹಿರೇಹಡ್ಲಿಗಿ | 192/B & 192/C | 3.52 & 5.77 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ತಹಶೀಲ್ದಾರರು, ಬಳ್ಳಾರಿ ಇವರ ಹಿಂಬರಹ ಸಂಖ್ಯೆ: ಕಂ/ಪಹಣಿ/60/2013-14 ದಿನಾಂಕ: 17.12.2013 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:12-06-2015, 31-07-2015, 13-1-2015, ಮತ್ತು 05-08-2016 ರಂದು ಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳುಮತ್ತು ಪ್ರತಿವಾದಿಗಳು ಹಾಗೂ ವಾದಿ ಪರವಕೀಲರು ದಿನಾಂಕ 05-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಬಳ್ಳಾರಿ ತಾಲ್ಲೂಕಿನ ಹಿರೇಹಡ್ಲಿಗಿ ಗ್ರಾಮದ ಸ.ನಂ 192/B & 192/C ವಿಸ್ತೀರ್ಣ: 3.52 & 5.77 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಬಳ್ಳಾರಿ ಇವರ ಹಿಂಬರಹ ಸಂಖ್ಯೆ: ಕಂ/ಪಹಣಿ/60/2013-14 ದಿನಾಂಕ: 17.12.2013 ರ ಪ್ರಶ್ನಿತ ಆದೇಶವನ್ನು ಪರಿಶೀಲಿಸಲಾಗಿ ಸದರಿ ವಿವಾದಾಸ್ಪದ ಪ್ರಕರಣವು ಪಹಣಿ ತಿದ್ದುಪಡಿ ವ್ಯಾಪ್ತಿಗೆ ಸಂಬಂಧಿಸಿದ್ದಾಗಿದ್ದು, ತಿದ್ದುಪಡಿ ವ್ಯಾಪ್ತಿಯಲ್ಲಿ ಈ ವಿವಾದವನ್ನು ಇತ್ಯಾರ್ಥಪಡಿಸುವಲ್ಲಿ ಎಲ್ಲರ ಸಹಮತವಿರುವುದಾಗಿ ಎರಡು ಪಕ್ಷಗಾರರು ಲಿಖಿತವಾಗಿ ತಿಳಿಸಿದ್ದು ಇರುತ್ತದೆ. ಕಾರಣ ಬಳ್ಳಾರಿ ತಾಲ್ಲೂಕಿನ ಹಿರೇಹಡ್ಲಿಗಿ